

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **28-12-2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬರಲ್ಲಿ ಮೊದಲನೆಯ ಹೆಸರು ಹಝ್ರತ್ ಅಬ್ದುಲ್ಲ ಬಿನ್ ರಬೀಅ್ ಅನ್‌ಸಾರಿ(ರ) ಅವರದಾಗಿದೆ. ಅವರು ಬೈಅತೆ ಅಖಬ ಸಾನಿಯದಲ್ಲಿ ಭಾಗವಹಿಸಿದ್ದರು. ಅವರು ಬದರ್, ಉಹುದ್, ಮೌತ ಯುದ್ಧಗಳಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಅವರು ಮೌತ ಯುದ್ಧದಲ್ಲಿ ಶಹೀದರಾದರು. ಎರಡನೆಯ ಸಹಾಬಿ ಹಝ್ರತ್ ಅತಿಯ್ಯ ಬಿನ್ ನವೀರ(ರ). ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಅವರ ಬಗ್ಗೆ ಇಷ್ಟೇ ಮಾಹಿತಿ ದೊರೆತಿದೆ. ಇನ್ನೊಬ್ಬ ಸಹಾಬಿ ಹಝ್ರತ್ ಸಹ್ಲ್ ಬಿನ್ ಖೈಸ್(ರ). ಪ್ರಸಿದ್ಧ ಕವಿ ಹಝ್ರತ್ ಕಅಬ್ ಬಿನ್ ಮಾಲಿಕರ ಚಿಕ್ಕಪ್ಪನ ಪುತ್ರ ಅವರಾಗಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು ಮತ್ತು ಉಹುದ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧದಲ್ಲಿ ಶಹೀದರಾದವರ ಗೋರಿಗಳನ್ನು ಪ್ರತಿವರ್ಷ ಸಂದರ್ಶಿಸುತ್ತಿದ್ದರು. ಅವರು ಹೇಳುತ್ತಿದ್ದರು: ನಾನು ಸಹ ಆ ಪರ್ವತದ ಜನರೊಂದಿಗೆ ಸೇರಿದ್ದರೆ ಎಷ್ಟು ಚೆನ್ನಾಗಿತ್ತು. ಎಂದರೆ ನನಗೆ ಸಹ ಆ ದಿನ ಶಹೀದನಾಗುವ ಭಾಗ್ಯ ಲಭಿಸುತ್ತಿತ್ತು.

ಒಂದು ದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಸ್‌ಯಿಬ್ ಬಿನ್ ಉಮೈರ್‌ರ ಗೋರಿಯ ಸಮೀಪ ನಿಂತು ಪ್ರಾರ್ಥಿಸಿದರು ಮತ್ತು ಈ ಕೆಳಗಿನ ಪವಿತ್ರ ಖುರ್‌ಆನ್ ವಚನವನ್ನು ಪಠಿಸಿದರು:

**ಮಿನಲ್ ಮೂಮಿನೀನ ರಿಜಾಲುನ್ ಸದಖೂ ಮಾ ಆಹದುಲ್ಲಾಹ ಅಲೈಹಿ, ಫಮಿನ್‌ಹುಮ್ ಮನ್ ಖಝಾ ನಹ್‌ಬಹೂ ವ ಮಿನ್‌ಹುಮ್ ಮನ್ ಯನ್‌ತಝಿರ್ ವಮಾ ಬದ್ದಲೂ ತಬ್‌ದೀಲ.**

ಅಲ್ಲಾಹನೊಂದಿಗೆ ತಾವು ಮಾಡಿದ ಒಡಂಬಡಿಕೆಯನ್ನು ಪಾಲಿಸಿದ ಕೆಲವರು ಸತ್ಯವಿಶ್ವಾಸಿಗಳ ಪೈಕಿಯಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಈಡೇರಿಸಿದ್ದಾರೆ, ಇನ್ನು ಕೆಲವರು (ಅದಕ್ಕೋಸ್ಕರ) ಸಂದರ್ಭವನ್ನು ಕಾಯುತ್ತಿದ್ದಾರೆ. ಅವರು ತುಸು ಮಾತ್ರವಾದರೂ ಬದಲಾಗಲಿಲ್ಲ. (ಪವಿತ್ರ ಖುರ್‌ಆನ್ 33: 24). ಅನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಾನು ಸಾಕ್ಷ್ಯ ಹೇಳುತ್ತೇನೆ. ಈ ಜನರು ಅಲ್ಲಾಹನ ಸನ್ನಿಧಿಯಲ್ಲಿ ಖಿಯಾಮತ್ ದಿನದಂದು ಶಹೀದರಾಗಿರುವರು. ನೀವು ಅವರ ಬಳಿಗೆ ಹೋಗುತ್ತಾ ಇರಿ. ಅವರನ್ನು ಸಂದರ್ಶಿಸಿರಿ. ಅವರಿಗೆ ಸಲಾಮ್ ಅರ್ಪಿಸಿರಿ. ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಅವನ ಹೆಸರಿನಲ್ಲಿ ಆಣೆ ಹಾಕಿ ಹೇಳುತ್ತೇನೆ, ಖಿಯಾಮತ್ ದಿನದ ತನಕ ಅವರಿಗೆ ಸಲಾಮ್ ಹೇಳುವವರಿಗೆ ಅವರು ಉತ್ತರ ನೀಡುವರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರು ಅವರ ಗೋರಿಗಳ ಬಳಿಗೆ ಬಂದು ಅವರಿಗೋಸ್ಕರ ಪ್ರಾರ್ಥಿಸುತ್ತಿದ್ದರು ಮತ್ತು ಸಲಾಮ್ ಸಮರ್ಪಿಸುತ್ತಿದ್ದರು. ಹಝ್ರತ್ ಸಹ್ಲ್ ಬಿನ್ ಖೈಸ್‌ರವರ ಸಹೋದರಿಯರಾದ ಹಝ್ರತ್ ಸಖ್ತ ಮತ್ತು ಹಝ್ರತ್ ಅಮ್‌ರಾ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ್ದರು ಮತ್ತು ಅವರನ್ನು ಬೈಅತ್ ಮಾಡುವ ಭಾಗ್ಯ ಗಳಿಸಿದರು.

ಮುಂದಿನ ಸಹಾಬಿ ಹಝ್ರತ್ ಅಬ್ದುಲ್ಲಾ ಬಿನ್ ಹುಮೈರುಲ್ ಅಶ್‌ಜಈ(ರ). ಅವರು ಬದರ್ ಯುದ್ಧದಲ್ಲಿ ತಮ್ಮ ಸಹೋದರ ಹಝ್ರತ್ ಖಾರಿಜರೊಂದಿಗೆ ಭಾಗವಹಿಸಿದರು. ಅವರು ಉಹುದ್ ಯುದ್ಧದಲ್ಲಿ ಸಹ ಭಾಗವಹಿಸಿದರು. ಹಝ್ರತ್ ಅಬ್ದುಲ್ಲಾ ಬಿನ್ ಹುಮೈರ್‌ರವರು ಉಹುದ್ ಯುದ್ಧದ ದಿವಸ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್ ಜೊತೆಗೆ ಬೆಟ್ಟದ ಮೇಲೆ ತಗ್ಗು ಪ್ರದೇಶದಲ್ಲಿ ಸ್ಥಿರವಾಗಿ ನಿಂತ ಕೆಲವು ಸಹಾಬರಲ್ಲಿ ಸೇರಿದ್ದರು. ಉಳಿದ ಸಹಾಬರು ಜಯದ ದೃಶ್ಯವನ್ನು ಕಂಡ ನಂತರ ಮುಸ್ಲಿಮರೊಂದಿಗೆ ಸೇರಲು ಇಳಿಯಲು ತೊಡಗಿದಾಗ ಹಝ್ರತ್ ಅಬ್ದುಲ್ಲಾ ಬಿನ್ ಹುಮೈರ್ ಅವರಿಗೆ ಉಪದೇಶಿಸಲು ಎದ್ದು ನಿಂತು ಮೊದಲು ಅಲ್ಲಾಹನಿಗೆ ಸ್ತುತಿಯರ್ಪಿಸಿ ಅನಂತರ ಅಲ್ಲಾಹನನ್ನು ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಲು ಉಪದೇಶಿಸಿದರು. ಆದರೆ ಬೆಟ್ಟದ ತಗ್ಗಿನಿಂದ ಇಳಿಯುತ್ತಿದ್ದವರು ಅವರ ಉಪದೇಶವನ್ನು ಕೇಳಲಿಲ್ಲ. ಅವರು ಕೆಳಗೆ ಇಳಿದು ಹೋಗಿಬಿಟ್ಟರು. ಆಗ ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್ ಜೊತೆಯಲ್ಲಿ ಬೆಟ್ಟದ ತಗ್ಗು ಭಾಗದಲ್ಲಿ ಹತ್ತಕ್ಕಿಂತ ಹೆಚ್ಚು ಸಹಾಬರಿರಲಿಲ್ಲ. ಆಗ ಖಾಲಿದ್ ಬಿನ್ ವಲೀದ್ ಮತ್ತು ಇಕ್ರಿಮ ಬಿನ್ ಅಬೂ ಜಹ್ಲ್ ಬೆಟ್ಟದ ತಗ್ಗು ಖಾಲಿಯಾಗಿರುವುದನ್ನು ಕಂಡು ಅಲ್ಲಿರುವ ಸಹಾಬರ ಮೇಲೆ ಆಕ್ರಮಣ ಮಾಡಿದರು. ಸಹಾಬರ ಈ ಚಿಕ್ಕ ತಂಡ ಶತ್ರುಗಳ ಮೇಲೆ ಬಾಣ ಹೂಡಿದರೂ ಶತ್ರುಗಳು ಅವರನ್ನು ಸಮೀಪಿಸಿ ಶಹೀದರನ್ನಾಗಿ ಮಾಡಿದರು.

ಇದರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ತಮ್ಮ ಗ್ರಂಥವಾದ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹೀಗೆ ಬರೆದಿದ್ದಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ಮೇಲೆ ಭರವಸೆ ಇರಿಸಿ ಮುಂದೆ ಸಾಗಿದರು ಮತ್ತು ಉಹುದ್ ಬೆಟ್ಟದ ಬದಿಯಲ್ಲಿ ಶಿಬಿರ ಹೂಡಿದರು. ಶಿಬಿರ ಹೇಗೆ ಹೂಡಲಾಗಿತ್ತೆಂದರೆ ಉಹುದ್ ಬೆಟ್ಟ ಸೈನ್ಯದ ಹಿಂಬಾಗದಲ್ಲಿತ್ತು ಮತ್ತು ಮದೀನ ಮುಂಬಾದಲ್ಲಿರುವಂತೆ

ಇತ್ತು. ಈ ರೀತಿ ಸೈನ್ಯದ ಹಿಂಭಾಗ ಸುರಕ್ಷಿತವಾಯಿತು. ಆದರೆ ಹಿಂಬಾಗದ ಬೆಟ್ಟದಲ್ಲಿ ಒಂದು ತಗ್ಗು ಪ್ರದೇಶವಿದ್ದು ಅದರ ಮೂಲಕ ಶತ್ರುಗಳ ಆಕ್ರಮಣ ಸಾಧ್ಯವಿತ್ತು. ಆ ಭಾಗದ ಸಂರಕ್ಷಣೆಗೆ ಅಬ್ದುಲ್ಲಾ ಬಿನ್ ಜುಬೈರ್‌ರವರ ನಾಯಕತ್ವದಲ್ಲಿ ಬಾಣ ಹೂಡುವವರಾದ ಐವತ್ತು ಸಹಾಬರನ್ನು ನೇಮಿಸಲಾಯಿತು. ಅವರೊಂದಿಗೆ ಒತ್ತಿ ಹೇಳಲಾಗಿತ್ತು: ಏನೇ ಆಗಲಿ ಅವರು ಆ ಸ್ಥಳದಿಂದ ಹೋಗಬಾರದು ಮತ್ತು ಶತ್ರುಗಳ ವಿರುದ್ಧ ಬಾಣ ಹೂಡುತ್ತಾ ಇರಬೇಕು ಎಂದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬೆಟ್ಟದ ಆ ತಗ್ಗು ಪ್ರದೇಶದ ಬಗ್ಗೆ ಎಷ್ಟು ಚಿಂತೆ ಇತ್ತೆಂದರೆ ಅವರು ಅಬ್ದುಲ್ಲಾ ಬಿನ್ ಜುಬೈರ್‌ರೊಂದಿಗೆ ಪದೇ ಪದೇ ಹೇಳಿದರು: ನೀವು ಸ್ಥಳವನ್ನು ಯಾವ ಸ್ಥಿತಿಯಲ್ಲಿಯೂ ಬಿಟ್ಟು ಹೋಗಬಾರದು. ನಮಗೆ ಜಯ ಲಭಿಸಿ ಶತ್ರುಗಳು ಸೋತು ಓಡಿ ಹೋದರೂ ನೀವು ಈ ಸ್ಥಳದಿಂದ ಬಿಟ್ಟುಹೋಗಬಾರದು. ಅಥವಾ ಮುಸ್ಲಿಮರಿಗೆ ಸೋಲು ಸಂಭವಿಸಿ ಶತ್ರುಗಳು ಜಯಶಾಲಿಗಳಾದರೂ ಸಹ ನೀವು ಇಲ್ಲಿಂದ ನಿಮಗೆ ಆಜ್ಞೆ ದೊರಕುವ ತನಕ ದೂರ ಸರಿಯಬಾರದು. ಒಂದು ಹದೀಸ್ ವರದಿ ಹೀಗೆ ಸಹ ಇದೆ: ರಣಹದ್ದುಗಳು ನಮ್ಮ ಮಾಂಸವನ್ನು ಕಿತ್ತು ತಿನ್ನಲು ತೊಡಗಿದರೂ ನೀವು ಇಲ್ಲಿಂದ ಕದಲಬಾರದು – ನಿಮಗೆ ಇಲ್ಲಿಂದ ಹೋಗಲು ಆಜ್ಞೆ ದೊರಕುವ ತನಕ.

ತನ್ನ ಸೈನ್ಯದ ಹಿಂಭಾಗವನ್ನು ಚೆನ್ನಾಗಿ ಸುರಕ್ಷಿತವನ್ನಾಗಿ ಮಾಡಿದ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಂ ಸೇನೆವನ್ನು ಸಾಲುಗಟ್ಟಿಸಿ ನಿಲ್ಲಿಸಿದರು. ವಿವಿಧ ಸೇನಾ ದಳಗಳಿಗೆ ಅಮೀರರನ್ನು ಅಲ್ಲಲ್ಲಿ ನೇಮಿಸಿದರು. ಅಬ್ದುಲ್ಲಾ ಬಿನ್ ಜುಬೈರ್ ಜೊತೆಗಿದ್ದವರು ಮುಸ್ಲಿಮ್ ಸೈನ್ಯ ಜಯಗಳಿಸಿದೆ ಎಂದು ಕಂಡಾಗ ಅವರು ತಮ್ಮ ಅಮೀರ್ ಅಬ್ದುಲ್ಲಾ ಬಿನ್ ಜುಬೈರ್‌ರೊಂದಿಗೆ ಹೇಳಿದರು: ಈಗ ಮುಸ್ಲಿಮ್ ಸೈನ್ಯ ಜಯ ಗಳಿಸಿ ಗನೀಮತ್ ಸಂಪತ್ತು ಸಂಗ್ರಹಿಸುತ್ತಿದೆ. ನಾವು ಸಹ ಅವರ ಜೊತೆಗೂಡಲು ಅನುಮತಿ ನೀಡಿರಿ. ಆಗ ಅಬ್ದುಲ್ಲಾ ಅವರನ್ನು ತಡೆದರು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒತ್ತಿ ಹೇಳಿದ ಮಾರ್ಗದರ್ಶನವನ್ನು ನೆನಪಿಸಿಕೊಟ್ಟರು. ಆದರೆ ಜಯಗಳಿಸಿದ ಸಂತೋಷದಲ್ಲಿ ನಿರ್ಲಕ್ಷ್ಯರಾಗಿದ್ದ ಆ ಜನರು ತಮ್ಮ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಅವರು ಹೀಗೆ ಹೇಳಿದರು: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುವ ಮಾತಿನ ಅರ್ಥವೇನೆಂದರೆ ಜಯಗಳಿಸಿದೆವು ಎಂದು ಪೂರ್ಣವಾಗಿ ಮನವರಿಕೆ ಆಗುವ ತನಕ ಈ ಸ್ಥಳವನ್ನು ಬಿಡಬಾರದು ಎಂದಾಗಿತ್ತು. ಆದರೆ ಈಗ ಜಯ ಲಭಿಸಿರುವ ಕಾರಣ ಇಲ್ಲಿಂದ ಹೋಗಲು ಅಡ್ಡಿ ಏನೂ ಇಲ್ಲ ಎಂದು ಹೇಳಿ ಅವರು ಹೋದರು. ಅಲ್ಲಿ ಅಬ್ದುಲ್ಲಾ ಬಿನ್ ಜುಬೈರ್ ಮತ್ತು ಅವರ ಆರೇಳು ಜೊತೆಗಾರರ ಹೊರತು ಬೇರೆ ಯಾರೂ ಭದ್ರತೆಗೆ ಇರಲಿಲ್ಲ. ಆಗ ಖಾಲಿದ್ ಬಿನ್ ವಲೀದರ ತೀಕ್ಷ್ಣ ದೃಷ್ಟಿ ದೂರದಿಂದ ಆ ತಗ್ಗು ಪ್ರದೇಶ ನೋಡಿದಾಗ ಅಲ್ಲಿ ಸಾಕಷ್ಟು ಸೈನಿಕರು ಇಲ್ಲವೆಂದು ಕಂಡರು. ಆಗ ಅವರು ತನ್ನ ಸವಾರರನ್ನು ಬೇಗನೆ ಜಮಾಯಿಸಿ ಆ ಕಡೆಗೆ ಕೂಡಲೆ ದೌಡಾಯಿಸಿದರು. ಅವರ ಹಿಂದೆ ಅಬೂ ಜಹಲ್ ಪುತ್ರ ಇಕ್ರಿಮ ಸಹ ಇದ್ದರು. ಈ ಇಬ್ಬರು ಸೇರಿ ಅಬ್ದುಲ್ಲಾ ಬಿನ್ ಜುಬೈರ್ ಮತ್ತು ಜೊತೆಗಾರರನ್ನು ಸುಲಭದಲ್ಲಿ ಶಹೀದರನ್ನಾಗಿ ಮಾಡಿ ಇಸ್ಲಾಮೀ ಸೈನ್ಯವನ್ನು ಹಿಂಬಾಗದಿಂದ ಅಚಾನಕವಾಗಿ ಆಕ್ರಮಣ ಮಾಡಿದರು.

ಇನ್ನು ಮುಂದೆ ನಾನು ಪ್ರಸ್ತಾಪಿಸುವುದು ಹಝ್ರತ್ ಉಬೈದ್ ಬಿನ್ ಔಸ್ ಅನ್‌ಸಾರಿಯ ಬಗ್ಗೆಯಾಗಿದೆ. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿ ಹಝ್ರತ್ ಉಖೈಲ್ ಬಿನ್ ಅಬೂ ತಾಲಿಬರನ್ನು ಕೈದಿಯನ್ನಾಗಿ ಮಾಡಿದರು. ಅವರು ಹಝ್ರತ್ ಅಬ್ಬಾಸ್‌ರನ್ನೂ ಹಝ್ರತ್ ನೌಫಲ್‌ರನ್ನೂ ಸಹ ಸೆರೆ ಹಿಡಿದಿದ್ದರು ಎಂದು ಹೇಳಲಾಗುತ್ತಿದೆ. ಈ ಮೂವರನ್ನು ಹಗ್ಗದಿಂದ ಕಟ್ಟಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ತಂದಾಗ ಅವರು ಹೇಳಿದರು: **ಲಖದ್ ಅಆನಕ ಅಲೈಹಿಮ್ ಮಲಕುನ್ ಕರೀಮ್.** ನಿಶ್ಚಯವಾಗಿಯೂ ಇದರಲ್ಲಿ ಒಬ್ಬ ಗೌರವಾನ್ವಿತ ಮಲಕ್ ನಿಮಗೆ ಸಹಾಯ ಮಾಡಿದೆ. ಇದೇ ಕಾರಣದಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಮುಖರ್ರ್ರಿ ಎಂಬ ಬಿರುದು ನೀಡಿದರು. ಎಂದರೆ ಸಂಕೋಲೆಯಿಂದ ಬಂಧಿಸುವವ.

ಅಬ್ದುಲ್ಲಾ ಬಿನ್ ಜುಬೈರ್ ಬಗ್ಗೆ ನಾನು ಪುನಃ ಪ್ರಸ್ತಾಪಿಸುವೆನು. ಬೈಅತೆ ಅಖಬ ಸಾನಿಯದಲ್ಲಿ ಬೈಅತ್ ಮಾಡಿದ ಎಪ್ಪತ್ತು ಜನರಲ್ಲಿ ಅವರು ಸೇರಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಬಾಗವಹಿಸಿದ್ದರು ಮತ್ತು ಉಹುದ್ ಯುದ್ಧದಲ್ಲಿ ಶಹೀದರಾದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪುತ್ರಿಯಾದ ಹಝ್ರತ್ ಝೈನಬರ ಪತಿ ಹಝ್ರತ್ ಅಬುಲ್ ಆಸ್ ಎಂಬವರು ಬಹುದೇವಾರಾಧಕರಾದ ಮಕ್ಕದವರ ಜೊತೆಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್ ಅವರನ್ನು ಬಂಧಿಸಿದರು. ಅವರನ್ನು ಬಿಡುಗಡೆ ಮಾಡಲು ಪರಿಹಾರವಾಗಿ ಕಳುಹಿಸಿದ ವಸ್ತುಗಳಲ್ಲಿ ಒಂದು ಹಾರವನ್ನೂ ಹಝ್ರತ್ ಝೈನಬ ಕಳುಹಿಸಿದ್ದರು. ಆಗ ಹಝ್ರತ್ ಝೈನಬ ಮಕ್ಕದಲ್ಲಿದ್ದರು. ಆ ಹಾರವು ಹಝ್ರತ್ ಖದೀಜ ತನ್ನ ಪುತ್ರಿಗೆ ವಿವಾಹದ ಸಮಯ ಪಾರಿತೋಷಿಕವಾಗಿ ನೀಡಿದ ಹಾರವಾಗಿತ್ತು. ಆ ಹಾರವನ್ನು ನೋಡಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಮ್ಮ ಪತ್ನಿ ಹಝ್ರತ್ ಖದೀಜರ ನೆನಪಾಗಿ ಆಶ್ರುಭರಿತರಾದರು. ಅವರು ಸಹಾಬರೊಂದಿಗೆ ಹೇಳಿದರು: ನೀವು ಒಪ್ಪುವುದಾದರೆ ಝೈನಬಳ ವಸ್ತುಗಳನ್ನು ಅವಳಿಗೆ ಮರಳಿಸಿರಿ. ಸಹಾಬರು ಕೂಡಲೆ ಅದನ್ನು ಝೈನಬರಿಗೆ ಮರಳಿಸಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಗದು ಪರಿಹಾರ ಧನಕ್ಕೆ ಬದಲಾಗಿ ಅಬುಲ್ ಆಸ್‌ರೊಂದಿಗೆ ಈ ಶರತ್ತು ನಿಶ್ಚಯಿಸಿದರು. ಅವರು ಮಕ್ಕಕ್ಕೆ ಹೋಗಿ ಝೈನಬರನ್ನು ಮದೀನಕ್ಕೆ ಕಳುಹಿಸಬೇಕು ಎಂದು. ಈ ರೀತಿ ಒಂದು ಸತ್ಯವಿಶ್ವಾಸಿ ಆತ್ಮವು ಕುಫ್ರ್‌ನಿಂದ ವಿಮೋಚನೆ ಗಳಿಸಿತು. ಸ್ವಲ್ಪ ಕಾಲದ ನಂತರ ಅಬುಲ್ ಆಸ್ ಸಹ ಮುಸ್ಲಿಮರಾಗಿ ಮದೀನಕ್ಕೆ ಬಂದರು. ಈ ರೀತಿ ಪತಿ ಪತ್ನಿಯರು ಪುನಃ ಜೊತೆ ಸೇರಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಸಹ ಉಹುದ್ ಯುದ್ಧದ ಬಗ್ಗೆ ವಿವರಿಸಿದ್ದಾರೆ. ಅವರು ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಜಮಾಯಿಸಿದ್ದ ಸಹಾಬರು, ಅವಿಶ್ವಾಸಿಗಳು ಅಚಾನಕವಾಗಿ ಆಕ್ರಮಿಸಿದಾಗ ಹಿಂದಕ್ಕೆ ತಳ್ಳಲ್ಪಟ್ಟರು. ಅವಿಶ್ವಾಸಿಗಳು ಹಿಂದೆ ಸರಿದ ಕೂಡಲೆ ಸಹಾಬರು ಪುನಃ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಜಮಾಯಿಸಿದರು. ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೇಹವನ್ನು ಎತ್ತಿದರು. ಸ್ವಲ್ಪ ಸಮಯದೊಳಗೆ ಅವರಿಗೆ ಪ್ರಜ್ಞೆ ಮರುಕಳಿಸಿತು. ಸಹಾಬರು ಮೈದಾನದಲ್ಲಿ ನಾಲ್ಕು ದಿಕ್ಕುಗಳಿಗೂ ಜನರನ್ನು ಓಡಿಸಿ ಮುಸ್ಲಿಮರು ಪುನಃ ಜಮಾಯಿಸುವಂತೆ ಮಾಡಿದರು. ಓಡಿಹೋದ ಸೈನ್ಯ ಪುನಃ ಜಮಾಯಿಸಲು ತೊಡಗಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರೊಂದಿಗೆ ಬೆಟ್ಟದ ಬದಿಗೆ ಹೋದರು. ಬೆಟ್ಟದ ಕೆಳಗೆ ಜಮಾಯಿಸಿದ ಮುಸ್ಲಿಮ್ ಸೈನ್ಯವನ್ನು ನೋಡಿ ಅಬೂ ಸುಫ್‌ಯಾನ್ ಬಹಳ ಉಚ್ಚ ಧ್ವನಿಯಿಂದ ಹೇಳಿದರು: ನಾವು ಮುಹಮ್ಮದನ್ನು ಹತ್ಯೆ ಮಾಡಿದೆವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಸುಫ್‌ಯಾನಿನ ಮಾತಿಗೆ ಉತ್ತರ ಹೇಳಲಿಲ್ಲ. ಏಕೆಂದರೆ ಅವರಿಗೆ ವಾಸ್ತವಿಕ ಸ್ಥಿತಿ ತಿಳಿದರೆ ಪುನಃ ಆಕ್ರಮಣ ಮಾಡುವ ಸಾಧ್ಯತೆ ಇತ್ತು. ಆಗ ಮುಸ್ಲಿಮರು ಬಲಹೀನ ಸ್ಥಿತಿಯಲ್ಲಿದ್ದರು. ನಂತರ ಅಬೂ ಸುಫ್‌ಯಾನ್, ಹಝ್ರತ್ ಅಬೂಬಕರ್(ರ) ಹಝ್ರತ್ ಉಮರ್(ರ)ರವರ ಹೆಸರು ಹೇಳಿ ಅವರನ್ನು ಸಹ ಕೊಂದುದಾಗಿ ಹೇಳಿದರು. ಅವುಗಳಿಗೆ ಉತ್ತರ ಹೇಳಬಾರದೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸೂಚಿಸಿದರು. ಆಗ ಅಬೂ ಸುಫ್‌ಯಾನ್ ಮತ್ತು ಸಂಗಡಿಗರು **ಉಅ್‌ಲು ಹುಬುಲ್** ಎಂದು ಸಂತೋಷದಿಂದ ಘೋಷಿಸಲು ತೊಡಗಿದರು. ಎಂದರೆ ನಮ್ಮ ಗೌರವಾನ್ವಿತ ಹುಬುಲ್ ವಿಗ್ರಹದ ವೈಭವ ಉನ್ನತಗೊಂಡಿದೆ, ಅದು ಇಂದು ಇಸ್ಲಾಮನ್ನು ಕೊನೆಗೊಳಿಸಿದೆ. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉದ್ವೇಗಭರಿತರಾಗಿ ಹೇಳಿದರು: ನೀವು ಏಕೆ ಉತ್ತರ ಕೊಡುವುದಿಲ್ಲ. ಸಹಾಬರು ಕೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ನಾವು ಏನೆಂದು ಉತ್ತರ ನೀಡಬೇಕು. ಅವರು ಹೇಳಿದರು **ಅಲ್ಲಾಹು ಅಅ್‌ಲಾ ವಅಜಲ್ಲ್, ಅಲ್ಲಾಹು ಅಅ್‌ಲಾ ವಅಜಲ್ಲ್** ಎಂದು ಹೇಳಿರಿ. ಹುಬುಲನ ವೈಭವ ಉನ್ನತಗೊಂಡಿದೆ ಎಂದು ನೀವು ಸುಳ್ಳು ಹೇಳುತ್ತಿರುವಿರಿ. ಸಹಭಾಗಿಗಳಿಲ್ಲದ ಅಲ್ಲಾಹನ ವೈಭವವೇ ಉನ್ನತಗೊಳಿಸಲ್ಪಟ್ಟಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಪವಿತ್ರ ಖುರ್‌ಆನಿನ **ಫಲ್‌ಯಹ್‌ಝರಿಲ್ಲಝೀನ ಯುಖಾಲಿಫೂನ ಅನ್ ಅಮ್‌ರಿಹೀ ಅನ್ ತುಸೀಬಹುಮ್ ಫಿತ್‌ನತುನ್ ಅವ್ ಯುಸೀಬಹುಮ್ ಅಝಾಬುನ್ ಅಲೀಮ್.** ಈ ವಚನವನ್ನು ವ್ಯಾಖ್ಯಾನಿಸುತ್ತಾ ಹೇಳುತ್ತಾರೆ: ಸಂದೇಶವಾಹಕರ ಆಜ್ಞೆಯನ್ನು ವಿರೋಧಿಸುವವರು ಈ ವಿಷಯದ ಬಗ್ಗೆ ಭಯಪಡಬೇಕು. ಅವರಿಗೆ ಅಲ್ಲಾಹನಿಂದ ಯಾವುದಾದರೂ ವಿಪತ್ತು ಬಂದೆರಗುವ ಬಗ್ಗೆ ಅಥವಾ ಯಾವುದಾದರೂ ದಾರುಣ ಶಿಕ್ಷೆಗೆ ಪಾತ್ರರಾಗುವ ಬಗ್ಗೆ. ನೋಡಿರಿ, ಉಹುದ್ ಯುದ್ಧದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಯನ್ನು ಉಲ್ಲಂಘಿಸಿದ ಕಾರಣದಿಂದ ಇಸ್ಲಾಮೀ ಸೈನ್ಯಕ್ಕೆ ಎಷ್ಟು ಹಾನಿ ಸಂಭವಿಸಿತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಬೆಟ್ಟದ ತಗ್ಗು ಪ್ರದೇಶದ ಸಂರಕ್ಷಣೆಗೆ ಐವತ್ತು ಸೈನಿಕರನ್ನು ನೇಮಿಸಿದ್ದರು. ಅದು ಎಷ್ಟು ಆಯಕಟ್ಟಿನ ಸ್ಥಳವಾಗಿತ್ತೆಂದರೆ ಅವರು ಸೇನಾ ತಂಡದ ನಾಯಕರಾದ ಅಬ್ದುಲ್ಲಾ ಬಿನ್ ಜುಬೈರರೊಂದಿಗೆ ಹೇಳಿದ್ದರು: ನಾವು ಕೊಲ್ಲಲ್ಪಟ್ಟರೂ ಅಥವಾ ಗೆದ್ದರೂ ನೀವು ಈ ಸ್ಥಳವನ್ನು ಬಿಟ್ಟು ಹೋಗಬಾರದು. ಯುದ್ಧದಲ್ಲಿ ಬಹುದೇವಾರಾಧಕರಿಗೆ ಸೋಲಾಯಿತು. ಆಗ ಆ ಸ್ಥಳದಲ್ಲಿ ನೇಮಿಸಲ್ಪಟ್ಟಿದ್ದ ಸೈನಿಕರು ತಮ್ಮ ನಾಯಕನೊಂದಿಗೆ ಹೇಳಿದರು: ಈಗ ನಮಗೆ ಜಯಲಭಿಸಿದೆ. ನಾವು ಇನ್ನೂ ಇಲ್ಲಿಯೇ ನಿಲ್ಲುವುದು ಅನಾವಶ್ಯಕವಾಗಿದೆ. ನಾವು ಸಹ ಯುದ್ಧದಲ್ಲಿ ಭಾಗವಹಿಸಲು ಅನುಮತಿ ನೀಡಿರಿ ಮತ್ತು ನಾವು ಸಹ ಪುಣ್ಯ ಗಳಿಸುವವರಾಗುವಂತೆ ಮಾಡಿರಿ. ಅವರ ಮೇಲಧಿಕಾರಿ ಅವರೊಂದಿಗೆ ಹೇಳಿದರು: ನೀವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗೆ ವಿರುದ್ಧವಾಗಿ ವರ್ತಿಸಬೇಡಿರಿ. ಆದರೆ ಆ ಸೈನಿಕರು ಅಲ್ಲಾಹನ ರಸೂಲರ ಆಜ್ಞೆಯ ಮೇಲೆ ತಮ್ಮ ಅಭಿಪ್ರಾಯಕ್ಕೆ ಆದ್ಯತೆ ನೀಡುತ್ತಾ ಆ ಸ್ಥಳವನ್ನು ಬಿಟ್ಟು ಹೋದರು. ಅವಿಶ್ವಾಸಿಗಳ ನಾಯಕ ಖಾಲಿದ್ ಬಿನ್ ವಲೀದ್ ಹಿಂದಿರುಗಿ ನೋಡಿದಾಗ ಆ ತಗ್ಗಾದ ಸ್ಥಳ ಖಾಲಿಯಾಗಿ ಇರುವುದಾಗಿ ಕಾಣಿಸಿತು. ಅವರು ತನ್ನ ಓಡಿ ಹೋಗುತ್ತಿರುವ ಸೇನಾದಳವನ್ನು ತಡೆದು ನಿಲ್ಲಿಸಿ ಬೆಟ್ಟವನ್ನೇರಿ ಅಲ್ಲಿದ್ದ ಕೆಲವೇ ಕೆಲವು ಮುಸ್ಲಿಮರನ್ನು ಕತ್ತರಿಸಿ ಹಾಕಿದರು ಮತ್ತು ಇಸ್ಲಾಮೀ ಸೈನ್ಯವನ್ನು ಹಿಂಭಾಗದಿಂದ ಆಕ್ರಮಿಸಿದರು. ಅವಿಶ್ವಾಸಿಗಳ ಈ ಆಕ್ರಮಣ ಎಷ್ಟೊಂದು ಅಚಾನಕವಾಗಿತ್ತೆಂದರೆ, ಜಯಗಳಿಸಿದ ಸಂತೋಷದಿಂದ ಅತ್ತಿತ್ತ ಚದುರಿ ಹೋಗಿದ್ದ ಮುಸ್ಲಿಮರಿಗೆ ತಮ್ಮ ಹೆಜ್ಜೆಗಳನ್ನು ಸ್ಥಿರಪಡಿಸಲು ಸಾಧ್ಯವಾಗಲಿಲ್ಲ. ಕೇವಲ ಕೆಲವು ಸಹಾಬರು ಓಡಿ ಬಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪ ಜಮಾಯಿಸಿದರು. ಅವರ ಸಂಖ್ಯೆ ಹೆಚ್ಚೆಂದರೆ ಇಪ್ಪತ್ತು ಇತ್ತು. ಈ ಕೆಲವು ಜನರು ಶತ್ರುಗಳನ್ನು ಎಷ್ಟು ಕಾಲ ಎದುರಿಸಲು ಸಾಧ್ಯವಿತ್ತು. ಕೊನೆಗೆ ಅವಿಶ್ವಾಸಿಗಳ ಆಕ್ರಮಣದ ಕಾರಣ ಈ ಸೈನಿಕರೂ ಹಿಂದಕ್ಕೆ ತಳ್ಳಲ್ಪಟ್ಟರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಣಾಂಗಣದಲ್ಲಿ ಒಬ್ಬಂಟಿಗನಾಗಿ ಉಳಿದರು. ಈ ಸ್ಥಿತಿಯಲ್ಲಿ ಅವರ ಶಿರಸ್ತ್ರಾಣದ ಮೇಲೆ ಒಂದು ಕಲ್ಲು ಬಿದ್ದಿತು. ಆ ಕಾರಣದಿಂದ ಅದರ ಮೊಳೆ ಅವರ ತಲೆಗೆ ನಾಟಿತು ಮತ್ತು ಅವರು ಪ್ರಜ್ಞಾಶೂನ್ಯರಾಗಿ ಒಂದು ಹೊಂಡದಲ್ಲಿ ಬಿದ್ದು ಬಿಟ್ಟರು. ಅನಂತರ ಒಬ್ಬ ಸಹಾಬಿ ಆ ಮೊಳೆಯನ್ನು ಹೊರಗೆಳೆದರು. ಆಗ ಅವರ ಹಲ್ಲು ಸಹ ಮುರಿದಿತ್ತು.

ಈ ಘಟನೆಯಲ್ಲಿ ಅಹ್ಮದಿಯರಿಗೆ ಸಹ ಒಂದು ನೀತಿಪಾಠವಿದೆ. ಒಂದು ಎಚ್ಚರಿಕೆ ಇದೆ. ಹಝ್ರತ್ ಮಸೀಹ್

ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ಪರಿಪೂರ್ಣ ಅನುಸರಣೆಯೇ ಜಯಗಳಿಗೆ ಖಾತರಿ ನೀಡುವುದು. ಪ್ರತಿಯೊಬ್ಬನು ತನ್ನ ಸ್ಥಿತಿಯ ಬಗ್ಗೆ ಪರಿಶೋಧಿಸಬೇಕಾದ ಆವಶ್ಯಕತೆ ಇದೆ. ತನ್ನ ಅನುಸರಣೆಯ ಮಟ್ಟ ಎಷ್ಟರ ಮಟ್ಟಿಗೆ ಇದೆ ಎಂದು ಪರಿಶೋಧಿಸಬೇಕು. ಅಲ್ಲಾಹನು ಹಝ್ರತ್ ಅಬ್ದುಲ್ಲಾ ಬಿನ್ ಜುಬೈರ್ ಮತ್ತು ಅವರ ಸಂಗಡಿಗರು ಆಜ್ಞೆಯ ಆತ್ಮವನ್ನು ಅರಿತುಕೊಳ್ಳುವಂತೆ ಮಾಡಿದ ಹಾಗೆ ನಾವು ಸಹ ಹಾಗೆಯೇ ಆಜ್ಞೆಗಳನ್ನು ಮನವರಿಕೆ ಮಾಡುವವರೂ ಪರಿಪೂರ್ಣ ಅನುಸರಣೆ ಮಾಡುವವರೂ ಆಗುವಂತಾಗಲಿ. ಹಾಗೆ ನಾವು ಅಲ್ಲಾಹನ ಅನುಗ್ರಹಗಳ ವಾರೀಸುದಾರರಾಗುವಂತೆ ಆಗಲಿ – ಆಮೀನ್.

ಜುಮುಅ ನಮಾಝ್ ನಂತರ ಒಂದು ನಮಾಝೆ ಜನಾಝು ಗಾಯಿಬ್ ಸಹ ನಿರ್ವಹಿಸುವೆನು. ಅದು ಕೆನಡದ ನಾದಿರುಲ್ ಹುಸ್ನೀ ಸಾಹಿಬರದಾಗಿದೆ. ಅವರು 85ನೇ ವರ್ಷ ಪ್ರಾಯದಲ್ಲಿ 2018 ಡಿಸೆಂಬರ್ 20ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್**. ಅವರು ನಿಷ್ಠಾವಂತರಾದ ಸಾತ್ವಿಕ ಸಜ್ಜನರಾಗಿದ್ದರು. ಅವರ ಸಾಂಪತ್ತಿಕ ತ್ಯಾಗಗಳು ಸಹ ಉನ್ನತ ಮಟ್ಟದವುಗಳಾಗಿದ್ದುವು. ಅವರು ಮೂಸೀ ಆಗಿದ್ದರು. ಅವರ ಪತ್ನಿ ಮತ್ತು ಪುತ್ರ ಅಹ್ಮದಿಯರಲ್ಲ. ಅಲ್ಲಾಹನು ಅವರ ಆಧ್ಯಾತ್ಮಿಕ ಪದವಿಗಳನ್ನು ಉನ್ನತಗೊಳಿಸಲಿ. ಅವರ ಪತ್ನಿ ಮತ್ತು ಪುತ್ರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡುವವರಾಗಲಿ. ಅವರು ತಮ್ಮ ಕುಟುಂಬದ ಬಗ್ಗೆ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸುವಂತಾಗಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 28-12-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon